Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 51/2020

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ತುಳಸಿರಾಮ |
| ತಂದೆಯ ಹೆಸರು | : | ತುಕಾರಾಮ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಚಾಲಕ |
| ವಾಸ | : | ಪುಟಪಾಕ ತಾಂಡಾ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 12-03-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-6 ಮತ್ತು 14 ರವರ ಪರಿಚಯ ಇದೆ. ನಾವು ಲಂಬಾಣಿ ಜಾತಿಗೆ ಸೇರಿದವರು. ಆರೋಪಿತರ ಪರಿಚಯ ಇಲ್ಲ. ಅವರು ಯಾವ ಜಾತಿಗೆ ಸೇರಿದ್ದಾರೆ ಎಂದು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಸಾಕ್ಷಿಗೆ ಈಗ ಫಿರ್ಯಾದಿ ತೋರಿಸುತ್ತಿದ್ದು ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಿ.ಪಿ.1ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಗುನ್ನೆ ಸ್ಥಳದ ಪಂಚನಾಮೆಯಲ್ಲಿರುವ ಸಹಿ ನೋಡಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ನಕ್ಷೆಯನ್ನು ನಿ.ಪಿ.3 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ 1 ಭಾವಚಿತ್ರವನ್ನು ತೋರಿಸುತ್ತಿದ್ದು ಅದರಲ್ಲಿ ನಾನು ಕಾಣುತ್ತಿದ್ದು ಸದರಿ ಭಾವಚಿತ್ರವನ್ನು ಯಾವ ಕಾರಣಕ್ಕಾಗಿ ತೆಗೆದಿದ್ದಾರೆ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ ಅದನ್ನು ನಿ.ಪಿ.4 ಎಂದು ಗುರುತಿಸಲಾಯಿತು. ನಿ.ಪಿ.1 ರಿಂದ 3 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ಪೊಲೀಸರು ಪುನಃ ಕರೆಯಿಸಿರುವುದಿಲ್ಲ ಯಾವುದೇ ಪುರವಣಿ ಹೇಳಿಕೆ ಪಡೆದಿರುವುದಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

<u>ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ</u>

2. ದಿಃ 15.11.2019 ರಂದು ಬೆಳಗಿನ ಜಾವ 6-00 ಗಂಟೆಗೆ ಯಾದಗಿರಿ ನಗರದ ಡಾನಬಾಸ್ಕೋ ಶಾಲೆಯ ಹತ್ತಿರ ನಾನು ಮತ್ತು ಚಾಸಾ-7 ರವರು ಚಾಸಾ-6 ರವರ ಆದೇಶದಂತೆ ಗುರುಮಠಕಲದಿಂದ ಲಾರಿಯನ್ನು ತೆಗೆದುಕೊಂಡು ರಾಯಚೂರು ಎಫ್.ಸಿ.ಐ. ಗೋದಾಮಗೆ ಹೋಗಿ ಅಲ್ಲಿ ಅಕ್ಕಿ ಚೀಲಗಳನ್ನು ತುಂಬಿಕೊಂಡು ಉಮಾರ್ಗಕ್ಕೆ ಹೋಗಿದ್ದು ಅಲ್ಲಿ ಅಕ್ಕಿ ಯಾರು ಇಳಿಸಿಕೊಳ್ಳಲು ಬಾರದೇ ಇದ್ದುದ್ದರಿಂದ ಅಲ್ಲಿಯ ಲಕ್ಷ್ಮಿ ತಿಮ್ಮಪ್ಪ ಸಾ ಮೀಲ್ ಟ್ರೆಡಿಂಗ ಕಂಪನಿ ಉಮರ್ಗಾದಲ್ಲಿ ಟಪಾಲು ಮಾಡಿಕೊಂಡು ದಿಃ 15.11.2019 ರಂದು ಬೆಳಗಿನ ಜಾವ 2-00 ಗಂಟೆ ಸುಮಾರಿಗೆ ಉಮರ್ಗಾದಿಂದ ಬಿಟ್ಟು ಕಲಬುರಗಿ ಯಾದಗಿರಿ ಮಾರ್ಗವಾಗಿ ರಾಯಚೂರಿಗೆ ಹೋಗುತ್ತಿರುವಾಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ.1 ರಿಂದ 3 ರವರು ನಾನು ನಡೆಸಿಕೊಂಡು ಬರುತ್ತಿದ್ದ ಚಾಸಾ-6 ಮತ್ತು 14 ರವರಿಗೆ ಸಂಬಂಧಿಸಿದ ಅಕ್ಕಿ ಲೋಡ್ ಇದ್ದ ಲಾರಿಯನ್ನು ಅಕ್ರಮವಾಗಿ ತಡೆದು ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಏಕೋದ್ದೇಶದಿಂದ ಚಾಸಾ-6 ಮತ್ತು 14 ರವರ ಮೇಲಿನ ದ್ವೇಷದಿಂದ 2 ನೇ ಆರೋಪಿತನು ನನಗೆ ಲಾರಿ ಇಂದ ಕೆಳಗೆ ಇಳಿಸಿ ಕೈಯಿಂದ ಬೆನ್ನಿಗೆ ಹೊಟ್ಟೆಗೆ ಹೊಡಿಬಡಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. 4 ನೇ ಆರೋಪಿತನು ಆರೋಪಿ ನಂ.1 ರಿಂದ 3 ರವರಿಗೆ ಕೃತ್ಯವನ್ನು ಎಸಗಲು ಕುಮ್ಮಕ್ಕು ನೀಡಿರುತ್ತಾನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ನನಗೆ ಮತ್ತು ಚಾಸಾ-6 ರವರಿಗೆ ಲಂಬಾಣಿ ಸೂಳೇ ಮಕ್ಕಳೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂಧನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ನನಗೆ ಮತ್ತು ಚಾಸಾ-6 ರವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ನಾನು ಈಗ ವಿವರವಾಗಿ ಓದಿ ಹೇಳಿದಂತೆ ನಿ.ಪಿ.1 ರಂತೆ ಪೊಲೀಸರ ಮುಂದೆ ಫಿರ್ಯಾದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

3. ದಿಃ 22.11.2019 ರಂದು ಬೆಳಿಗ್ಗೆ 10-30 ರಿಂದ 11-30 ಗಂಟೆಯ ವರೆಗೆ ಪಂಚರಾದ ಚಾಸಾ-2 ಭೀಮಣ್ಣ ಮತ್ತು ಚಾಸಾ-3 ಮರಲಿಂಗ ಇವರ ಸಮಕ್ಷಮದಲ್ಲಿ ನಾನು ತೋರಿಸಿದ

ಮೇರೆಗೆ ಗುನ್ಹೆ ಸ್ಥಳದ ಪಂಚನಾಮಯನ್ನು ಈಗ ವಿವರವಾಗಿ ಓದಿ ಹೇಳಿದ ನಿ.ಪಿ.2 ರಂತೆ ಮಾಡಿ ಆ ಕಾಲಕ್ಕೆ ನಿ.ಪಿ.3 ರಂತೆ ನಕ್ಷೆ ಹಾಗೂ ನಿ.ಪಿ.4 ರಂತೆ ಭಾವಚಿತ್ರ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

4. ಪೊಲೀಸರು ಪುನಃ ನನ್ನನ್ನು ದಿಃ 22.11.2019 ರಂದು ಪುನಃ ಕರೆಯಿಸಿ ಈಗ ವಿವರವಾಗಿ ಓದಿ ಹೇಳಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.5 ಎಂದು ಗುರುತಿಸಲಾಯಿತು. ಪೊಲೀಸರು ಪುನಃ ನನ್ನನ್ನು ದಿಃ 07.04.2020 ರಂದು ಈಗ ವಿವರವಾಗಿ ಓದಿ ಹೇಳಿದಂತೆ ಪೊಲೀಸರು ನನ್ನ ಮತ್ತೊಂದು ಪುರವಣಿ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪುರವಣಿ ಹೇಳಿಕೆಯನ್ನು ನಿ.ಪಿ.6 ಎಂದು ಗುರುತಿಸಲಾಯಿತು.

5. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಎಸ್.ಕೆ ವಕೀಲರಿಂದ</u>

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 51/2020

ಫ್ರಾ.ಸಾ. 2 ಚಾ.ಸಾ. 6

| | | |
|---|---|---|
| ಹೆಸರು | : | ನರೇಂದ್ರ ರಾಠೋಡ |
| ತಂದೆಯ ಹೆಸರು | : | ಪುನ್ಯಾ ನಾಯಕ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ | : | ಗುರುಮಠಕಲ್ |

**ಪ್ರಮಾಣ ವಚನ ಭೋಧಿಸಿದ ದಿನಾಂಕ: 12-03-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನನಗೆ ತುಳಸಿರಾಮ ಇವರ ಪರಿಚಯ ಇಲ್ಲ. ಚಾಸಾ-14 ನನ್ನ ಮಗ. ನಾವು ಲಂಬಾಣಿ ಜಾತಿಗೆ ಸೇರಿದವರು. ಆರೋಪಿತರ ಪರಿಚಯ ಇಲ್ಲ. ಅವರು ಯಾವ ಜಾತಿಗೆ ಸೇರಿದ್ದಾರೆ ಎಂದು ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಪೊಲೀಸರು ನನ್ನನ್ನು ಕರೆಯಿಸಿಲ್ಲ ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

**ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ**

2. ದಿಃ 15.11.2019 ರಂದು ಬೆಳಗಿನ ಜಾವ 6-00 ಗಂಟೆಗೆ ಯಾದಗಿರಿ ನಗರದ ಡಾನಬಾಸ್ಕೋ ಶಾಲೆಯ ಹತ್ತಿರ ಚಾಸಾ-1 ಮತ್ತು ಚಾಸಾ-7 ರವರು ನನ್ನ ಆದೇಶದಂತೆ ಗುರುಮಠಕಲದಿಂದ ಲಾರಿಯನ್ನು ತೆಗೆದುಕೊಂಡು ರಾಯಚೂರು ಎಫ್.ಸಿ.ಐ. ಗೋದಾಮಗೆ ಹೋಗಿ ಅಲ್ಲಿ ಅಕ್ಕಿ ಚೀಲಗಳನ್ನು ತುಂಬಿಕೊಂಡು ಉಮಾರ್ಗಕ್ಕೆ ಹೋಗಿದ್ದು ಅಲ್ಲಿ ಅಕ್ಕಿ ಯಾರು ಇಳಿಸಿಕೊಳ್ಳಲು ಬಾರದೇ ಇದ್ದುದ್ದರಿಂದ ಅಲ್ಲಿಯ ಲಕ್ಷ್ಮಿ ತಿಮ್ಮಪ್ಪ ಸಾ ಮೀಲ್ ಟ್ರೆಡಿಂಗ ಕಂಪನಿ ಉಮರ್ಗಾದಲ್ಲಿ ಟಪಾಲು ಮಾಡಿಕೊಂಡು ದಿಃ 15.11.2019 ರಂದು ಬೆಳಗಿನ ಜಾವ 2-00 ಗಂಟೆ ಸುಮಾರಿಗೆ ಉಮರ್ಗಾದಿಂದ ಬಿಟ್ಟು ಕಲಬುರಗಿ ಯಾದಗಿರಿ ಮಾರ್ಗವಾಗಿ ರಾಯಚೂರಿಗೆ ಹೋಗುತ್ತಿರುವಾಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನಂ.1 ರಿಂದ 3 ರವರು ಚಾಸಾ-1 ರವರು ನಡೆಸಿಕೊಂಡು ಬರುತ್ತಿದ್ದ ನನ್ನ ಮತ್ತು ಚಾಸಾ-14 ರವರಿಗೆ ಸಂಬಂಧಿಸಿದ ಅಕ್ಕಿ ಲೋಡ್ ಇದ್ದ ಲಾರಿಯನ್ನು ಅಕ್ರಮವಾಗಿ ತಡೆದು ನಿಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ಏಕೋದ್ದೇಶದಿಂದ ನನ್ನ ಮತ್ತು ಚಾಸಾ-14 ರವರ ಮೇಲಿನ ದ್ವೇಷದಿಂದ 2 ನೇ ಆರೋಪಿತನು ಚಾಸಾ-1 ರವರಿಗೆ ಲಾರಿ ಇಂದ ಕೆಳಗೆ ಇಳಿಸಿ ಕೈಯಿಂದ ಬೆನ್ನಿಗೆ ಹೊಟ್ಟೆಗೆ ಹೊಡಿಬಡಿ ಮಾಡಿರುತ್ತಾನೆ ಎಂದರೆ ಸರಿಯಲ್ಲ. 4 ನೇ ಆರೋಪಿತನು ಆರೋಪಿ ನಂ.1 ರಿಂದ 3 ರವರಿಗೆ ಕೃತ್ಯವನ್ನು ಎಸಗಲು ಕುಮ್ಮಕ್ಕು ನೀಡಿರುತ್ತಾನೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ನನಗೆ ಮತ್ತು ಚಾಸಾ-1 ರವರಿಗೆ ಲಂಬಾಣಿ ಸೂಳೀ ಮಕ್ಕಳೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಜಾತಿ ನಿಂಧನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರು ನನಗೆ ಮತ್ತು ಚಾಸಾ-1 ರವರಿಗೆ ಜೀವ ಸಹಿತ ಬಿಡುವುದಿಲ್ಲ ಎಂದು ಜೀವದ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಕುರಿತು ಈಗ ವಿವರವಾಗಿ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.7 ಎಂದು ಗುರುತಿಸಲಾಯಿತು.

3. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಸ್.ಎಸ್.ಕೆ ವಕೀಲರಿಂದ</u>

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಯಾದಗಿರಿ.